# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 658 (677) |
| ಸದಸ್ಯರ ಹೆಸರು | : | ಶ್ರೀ. ಪಿ.ಹೆಚ್. ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಬಾಧಿತರಾಗಿರುವ ಬಾಗಲಕೋಟೆ ಪಟ್ಟಣದ ಸಂತ್ರಸ್ತರಿಗೆ ನವನಗರದಲ್ಲಿನ ಯುನಿಟ್ 1 ಮತ್ತು ಯುನಿಟ್ 2 ರಲ್ಲಿ ಹಂಚಿಕೆಯಾಗಿರುವ ನಿವೇಶನಗಳಿಗೆ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಇ-ಸ್ವತ್ತು ನೋಂದಣಿ ಮಾಡಿಸಿಕೊಳ್ಳಲು ಕಡ್ಡಾಯಗೊಳಿಸಿ ಸರ್ಕಾರವು ಆದೇಶಿಸಿದ್ದು ಸರಿಯಷ್ಟೇ; ಆದರೆ, ಇಲ್ಲಿಯವರೆಗೆ ಯುನಿಟ್ 1 ಮತ್ತು ಯುನಿಟ್ 2 ರಲ್ಲಿ ಹಂಚಿಕೆಯಾದ ನಿವೇಶನಗಳ ಸಂಖ್ಯೆ ಎಷ್ಟು;</td><td>ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ (ಬಿ.ಟಿ.ಡಿ.ಎ.) ಯುನಿಟ್-1 ಮತ್ತು 2 ರಲ್ಲಿ ಸಂಪೂರ್ಣವಾಗಿ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿ ಮಾಡಲಾಗಿರುತ್ತದೆ. ಯುನಿಟ್-1 ಮತ್ತು 2 ರಲ್ಲಿ ಸಂತ್ರಸ್ಥರಿಗೆ ನಿವೇಶನ ಹಂಚಿಕೆ ಮಾಡಿದ ವಿವರ ಈ ಕೆಳಗಿನಂತಿವೆ:
<table>
<tr><th>ವಿವರ</th><th>ಹಂಚಿಕೆ ಮಾಡಿದ ನಿವೇಶನಗಳು</th></tr>
<tr><td>ಯುನಿಟ್-1</td><td>17201</td></tr>
<tr><td>ಯುನಿಟ್-2</td><td>6449</td></tr>
<tr><td>ಒಟ್ಟು</td><td>23650</td></tr>
</table></td></tr>
<tr><td>(ಆ)</td><td>ಇ-ಆಸ್ತಿ ಪಡೆಯಲು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇ-ಆಸ್ತಿ ವಿಲೇವಾರಿ ಮಾಡಿದ ಅರ್ಜಿಗಳ ಸಂಖ್ಯೆ ಎಷ್ಟು,; ವಿಲೇವಾರಿಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಮಾಹಿತಿಯನ್ನು ಯುನಿಟ್ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನೀಡುವುದು, ಅರ್ಜಿ ಸಲ್ಲಿಸಿದ ದಿನಾಂಕ, ಅರ್ಜಿಗಳ ವಿಲೇವಾರಿ ಮಾಡಿದ ದಿನಾಂಕಗಳ ಮಾಹಿತಿ ಸಹಿತ ನೀಡುವುದು; ಇ-ಸ್ವತ್ತು ವಿತರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ತಿಳಿಸುವುದು;</td><td>ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ (ಬಿ.ಟಿ.ಡಿ.ಎ.) ಯುನಿಟ್-1 ಮತ್ತು 2 ಕ್ಕೆ ಸಂಬಂಧಿಸಿದಂತೆ, ಇ-ಆಸ್ತಿ ಮೂಲಕ 2024ನೇ ಸಾಲಿನಿಂದ ಜುಲೈ-2026 ರವರೆಗೆ ಸಲ್ಲಿಸಿರುವ, ವಿಲೇವಾರಿ ಮಾಡಿದ ಹಾಗೂ ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಗಿನಂತಿವೆ:
<table>
<tr><th>ವಿವರ</th><th>ಇ-ಆಸ್ತಿ ಪಡೆಯಲು ಸಲ್ಲಿಸಿರುವ ಅರ್ಜಿಗಳು</th><th>ವಿಲೇವಾರಿ ಮಾಡಿದ ಅರ್ಜಿಗಳ ಸಂಖ್ಯೆ</th><th>ಬಾಕಿ ಇರುವ ಅರ್ಜಿಗಳ ಸಂಖ್ಯೆ</th></tr>
<tr><td>ಯುನಿಟ್-1</td><td>2603</td><td>1462</td><td>1141</td></tr>
<tr><td>ಯುನಿಟ್-2</td><td>949</td><td>634</td><td>315</td></tr>
<tr><td>ಒಟ್ಟು</td><td>3552</td><td>2096</td><td>1456</td></tr>
</table></td></tr>
<tr><td>(ಇ)</td><td>ಇ-ಸ್ವತ್ತು ಪ್ರಕ್ರಿಯೆಗೆ ಮೇಲಿಂದ ಮೇಲೆ ತಾಂತ್ರಿಕ ಸಮಸ್ಯೆ ಎಂದು ಹೇಳಿ ಬಿಟಿಡಿಎ ಇಂದ ಇ-ಸ್ವತ್ತು ಪ್ರಕ್ರಿಯೆ ಸ್ಥಗಿತಗೊಂಡಿದೆ. ಇದರಿಂದ ಸಂತ್ರಸ್ತರು ತೀವ್ರವಾದ ತೊಂದರೆ ಅನುಭವಿಸುತ್ತಿದ್ದಾರೆ; ಈ ಸಮಸ್ಯೆ ಪರಿಹರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?</td><td>ವೆಬ್‌ಸೈಟ್‌ನಲ್ಲಿನ ತಾಂತ್ರಿಕ ಸಮಸ್ಯೆಯಿಂದಾಗಿ ಪ್ರಕ್ರಿಯೆ ವಿಳಂಬವಾಗಿದ್ದು, ಪ್ರಸ್ತುತ ಯಾವುದೇ ತೊಂದರೆ ಇಲ್ಲದೇ ಇ-ಸ್ವತ್ತು ಉತಾರಗಳನ್ನು ಸೃಜಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td></tr>
</table>

ಸಂಖ್ಯೆ:ಜಸಂಇ 78 ಡಬ್ಲ್ಯೂಬಿಎಂ 2026

(ಎನ್. ಚಲುವರಾಯಸ್ವಾಮಿ)
**ಜಲಸಂಪನ್ಮೂಲ ಸಚಿವರು**